ಶ್ರೀ ಕಡಿದಾಳ್ ಮಂಜಪ್ಪ.—ವಕೀಲರನ್ನಿಟ್ಟು ಕೊಳ್ಳಬೇಕೆಂಬುದು ಕಾನೂನಿನ ಉದ್ದೇಶವಲ್ಲ.

ಶ್ರೀ ಎಸ್. ಗೋಪಾಲಗೌಡ.—ಈ ರೀತಿ ಮುಂಬಯಿ ಗೇಣಿ ಶಾಸನದಲ್ಲಿ ನಮೂದು ಮಾಡಿರುವ ಹಾಗೆ ಇಲ್ಲಿಯೂ ಮಾಡಿ ಮೈಸೂರು ಶಾಸನವನ್ನು ತಿದ್ದುಪಡಿ ಮಾಡುತಿ ರಾ ?

ಶ್ರೀ ಕಡಿದಾಳ್ ಮಂಜಪ್ಪ.—ಇದನ್ನು ನಿರ್ದಿಷ್ಟವಾಗಿ ಹೇಳುವುದರಿಂದ ಕಷ್ಟವಾಗುತ್ತದೆ. ಆದಕಾರಣ ಪಾರ್ಟಿಗಳ ವಿವೇಚನೆಗೇ ಈ ವಿಷಯವನ್ನು ಬಿಡುವುದು ಸೂಕ್ತವೆಂದು ಸರ್ಕಾರದ ಅಭಿಪ್ರಾಯ.

ಶ್ರೀ ಎಸ್. ಗೋಪಾಲಗೌಡ.—ಸರ್ಕಾರದಲ್ಲಿ ರೈತರು ಮಾಡಿಕೊಂಡಿರುವ ಮನವಿಯನ್ನು ಯೋಚನೆ ಮಾಡಲಾಗುತ್ತದೆಯೆ ?

ಶ್ರೀ ಕಡಿದಾಳ್ ಮಂಜಪ್ಪ.—ಎಲ್ಲರ ಪರವಾಗಿಯೂ ಅಮಲ್ದಾರರಿದ್ದಾರೆ.

ಶ್ರೀ ಎಸ್. ಗೋಪಾಲಗೌಡ.—ಈ ಕಾನೂನು ಮುಜರಾಯಿ ಜಮೀನುಗಳಿಗೂ ಅನ್ವಯಿಸುತ್ತದೆಯೆ ?

ಶ್ರೀ ಕಡಿದಾಳ್ ಮಂಜಪ್ಪ.—ಎಲ್ಲಾ ಜಮೀನುಗಳಿಗೂ ಅನ್ವಯಿಸುತ್ತದೆ, ಎಕ್ಸೆಪ್ಷನ್ ಇಲ್ಲ.

ಶ್ರೀ ಎಸ್. ಗೋಪಾಲಗೌಡ.—ಇದೇ ರೀತಿಯಲ್ಲಿ ಈ ಕಾನೂನು ಇನಾಂ, ಜೋಡಿ ಮತ್ತು ಇತರ ಜಮೀನುಗಳಿಗೂ ಅನ್ವಯಿಸುತ್ತದೆಯೆ ?

ಶ್ರೀ ಕಡಿದಾಳ್ ಮಂಜಪ್ಪ.—ಸರ್ಕಾರದ ಜಮೀನು, ಕೋ-ಆಪರೇಟಿವ್ ಸೊಸೈಟಿಗೆ ಸಂಬಂಧಪಟ್ಟ ಜಮೀನು, ಲೋಕಲ್ ಅಥಾರಿಟೀಸ್‌ಗೆ ಸಂಬಂಧಪಟ್ಟ ಜಮೀನು ಹೊರತು ಬಾಕಿ ಎಲ್ಲಕ್ಕೂ ಅನ್ವಯಿಸುತ್ತದೆ.

ಶ್ರೀ ಎಸ್. ಗೋಪಾಲಗೌಡ.—ಕಾನೂನಿನಲ್ಲಿ ಅಳತೆ, ತೂಕ ನಿಗದಿಮಾಡಿದೆಯೇ ಹೊರತು ಪಲ್ಯಾಕ್ಕೆ 100 ಸೇರು, ಮಣಕ್ಕೆ 40 ಸೇರು ಎಂದು ನಿಗದಿ ಮಾಡಿಲ್ಲ, ಅಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ಅದಕ್ಕೆ ಸೆಕ್ಷನ್ ಇದೆ.

ಶ್ರೀ ಎಸ್. ಗೋಪಾಲಗೌಡ.—ಸೆಕ್ಷನ್‌ಗೆ ವ್ಯತಿರಿಕ್ತವಾಗಿ ಮಲೆನಾಡು ಪ್ರದೇಶದಲ್ಲಿ ಬೇರೆ ಪದ್ಧತಿ, ಕರಾರು ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಕಡಿದಾಳ್ ಮಂಜಪ್ಪ.—ನಾನಾ ಕಡೆ ನಾನಾ ರೀತಿಯ ಖಂಡುಗವಿದೆ. ಅದಕ್ಕನುಸಾರವಾಗಿ ಕರಾರು ಮಾಡಿಕೊಂಡಿದ್ದಾರೆ. ಅದನ್ನು ಈಗ ಕಾನೂನು ಪ್ರಕಾರ ಬದಲಾಯಿಸುವುದಕ್ಕೆ ಅಗ್ರಿಮೆಂಟ್ ಬದಲಾವಣೆಮಾಡುವುದಕ್ಕೆ ಸ್ವಲ್ಪ ಕಷ್ಟವಾಗುತ್ತದೆ.

ಶ್ರೀ ಎಸ್. ಗೋಪಾಲಗೌಡ.—ಅದಕ್ಕೆ ಸರ್ಕಾರದ ವರೇನು ಪರಿಹಾರ ಕೊಟ್ಟಿದ್ದಾರೆ ?

ಶ್ರೀ ಕಡಿದಾಳ್ ಮಂಜಪ್ಪ.—ಅದಕ್ಕೆ ಈಗ ಗೇಣಿ ತೆಗೆದುಕೊಳ್ಳಬೇಕಾದರೆ ಪಲ್ಲ ಮತ್ತು ಮಣದ ಲೆಕ್ಕದಲ್ಲೇ ತೆಗೆದುಕೊಳ್ಳಬೇಕು ಎಂದು ಕಾನೂನಿನಲ್ಲಿ ವಿಧಾಯಕ ಮಾಡಲಾಗಿದೆ. ಈ ಕಾನೂನು ಸಾಕಷ್ಟು ರಕ್ಷಣೆ ನೀಡುತ್ತದೆಂದು ಸರ್ಕಾರಕ್ಕೆ ಕಂಡುಬಂದಿದೆ.

ಶ್ರೀ ಎಸ್. ಗೋಪಾಲಗೌಡ.—ಹಾಗಿದ್ದರೂ ಕಾನೂನನ್ನು ಉಲ್ಲಂಘಿಸಿ ಹಳೇ ಪದ್ಧತಿ ಪ್ರಕಾರವೇ ಅಳತೆ, ತೂಕ ಮಾಡುತ್ತಾ, ಅದೇ ರೀತಿ ಗೇಣಿ ಪಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಕಡಿದಾಳ್ ಮಂಜಪ್ಪ.—ನಿರ್ದಿಷ್ಟ ಸಂದರ್ಭಗಳ ಸರ್ಕಾರಕ್ಕೆ ಅರ್ಜಿ ಬಂದರೆ ಪರಿಶೀಲನೆಮಾಡಲಾಗುತ್ತದೆ.

Sri M. LINGANNA.—May I know in cases of muzrai lands the Amildar being the authority, is finding it difficult to fix the fair rent ?

Sri Kadidal MANJAPPA.—There is no difficulty in fixing the fair rent.

Sri M. LINGANNA.—He being the authority, it is very difficult for him to give a decision over these matters.

Sri Kadidal MANJAPPA.—No, Sir. We have not come across any such difficulties so far.

Sri M. LINGANNA.—May I know whether there is any provision in the Tenancy Act in regard to the muzrai lands which are leased for five years ?

Sri Kadidal MANJAPPA.—That Act is very clear. It applies even to the muzrai lands.

Sri M. LINGANNA.—Has it come to the notice of the Government that the Amildar finds it difficult in certain cases to revise the fair rent in muzrai lands in view of the fact that the Muzrai law is not amended by the executive order of Government ?

Sri Kadidal MANJAPPA.—It is the Tenancy Act ; not the Muzrai Act.

Sri M. LINGANNA.—That is a fact. But some of the authorities are doubting. May I request the Government that the Muzrai order is well defined and circulated to the Government authorities ?

Sri Kadidal MANJAPPA.—The Act is clear. If anybody is aggrieved, he may come up to Government.

Sri A. BHEEMAPPA NAIK.—Will the Government think of abolishing the Muzrai Act in these taluks ?

(No answer.)

Change of Bus timings (Applications and Appeals.)

Q.—2. Sri S. KARIAPPA (Virupakshapura).—

Will the Government be pleased to state :—

(*a*) the number of applications received by the District Magistrate from bus owners for change of timings (figures should be given districtwar and yearwar for the past five years) ;

(*b*) the number of appeals against the decision of the District Magistrate,

(SRI S. KARIAPPA.)

filed with the State Traffic Board Chairman in respect of timings ;

(*c*) whether they have contemplated the introduction of rotation system in bus timings ?

A.—Sri H. SIDDAVEERAPPA (Minister for Home and Industries).—

(*a*) Statement appended:

1	Bellary ...	Not available	
2	Chitaldrug.	1948-49 1949-50 1950-51 1951-52 1952-53	Figures not available
3	Mysore ...	1948-51 1952 1953	Not available 1 cases 23 "
4	Mandya ...	1948-49 1949-50 1950-51 1951-52 1952-53	2 7 12 16 17
5	Kolar	1948-49 1949-50 1950-51 1951-52 1952-53	6 7 13 15 37
6	Tumkur ...	1948-49 1949-50 1950-51 1951-52 1952-53	Not available 26 28 30 40
7	Chikmagalur	1948-49 1949-50 1950-51 1951-52 1952-53	3 3 4 6 3
8	Shimoga ...	1948-49 1949-50 1950-51 1951-52 1952-53	Not available 26
9	Bangalore ...	1948-49 1949-50 1950-51 1951-52 1952-53	Not available 17 47 49 56
10	Hassan ...	1949 1950 1951 1952 1953	9 14 13 9 6

(*b*) Fifty-one appeals since the State Transport Authority was constituted in May 1952.

(*c*) The matter is being examined.

ಶ್ರೀ ಎಸ್. ಕರಿಯಪ್ಪ.—ಬಸ್ಸುಗಳ ವೇಳಾ ಪಟ್ಟಿಗಳ ಸಂಬಂಧದಲ್ಲಿ ನರದಿ ಏರ್ಪಾಡು ಮಾಡುವುದು ಸರ್ಕಾರದ ಪರಿಶೀಲನೆಯಲ್ಲಿದೆಯೆಂದು ಹೇಳಿದ್ದೀರಿ. ಎಷ್ಟು ಕಾಲದಿಂದ ಇದೆ ?

*Sri H. SIDDAVEERAPPA.—Opinion of the R. T. As. and S. T. A. will be called for and afterwards the Government will pass orders.

ಶ್ರೀ ಎಸ್. ಕರಿಯಪ್ಪ.—ಈ ವಿಚಾರದಲ್ಲಿ ಸರ್ಕಾರ ಎಷ್ಟು ದಿವಸಗಳಲ್ಲಿ ಆಜ್ಞೆ ಹೊರಡಿಸಬಹುದೆಂದು ನಿರೀಕ್ಷೆ ಮಾಡಬಹುದು ?

Sri H. SIDDAVEERAPPA.—I will see that the matter is expedited.

Sri Mulka GOVINDA REDDY.—Are Government aware that this rotation system is in vogue in Madras State ?

Sri H. SIDDAVEERAPPA.—I have been informed like that.

Sri Mulka GOVINDA REDDY.—Is it not a fact that the State Transport Authority has made a recommendation to Government that this system should be introduced ?

Sri H SIDDAVEERAPPA.—I have not received any definite recommendation to that effect.

Sri Mulka GOVINDA REDDY.—Is it not desirable that this system should be introduced as early as possible ?

Sri H. SIDDAVEERAPPA.—It is being examined.

"Satta" Gambling : Prosecutions.

Q.—325. Sri M. V. RAMA RAO (Tumkur).—

Will the Government be pleased to state :—

(*a*) the number of prosecutions commenced under the amended Police Act for 'Satta' gambling since 1st August 1953 in—

(i) Bangalore City and Civil Station ;

(ii) the rest of Mysore State ;